Sri M. V. KRISHNAPPA.—They get better compensation than the royts of Sharavathy. The displaced persons from Panambur Harbour project had to leave their places immediately and so taking into account the urgency of the matter the Government built a big colony for the people of Panambur and they have also been given a larger amount of compensation than the Sharavathy ryots.

ಶ್ರೀ ಎಸ್. ಪಿ. ಫಾಯದೆ.—ಕಾರವಾರ ಜಿಲ್ಲೆಯಲ್ಲಿ ನಿರಾಶ್ರಿತರಿಗಾಗಿ ಭೂಮಿಯನ್ನು ಕೊಡಬೇಕೆಂದು ತಗೆದು ಇರಿಸಲಾಗಿದೆ. ಇದನ್ನು ಯಾವಾಗ ಬಿಡುಗಡೆ ಮಾಡಿಸಿ ಕೊಡುತ್ತೀರಿ ?

ಶ್ರೀ. ಎಂ. ವಿ. ಕೃಷ್ಣಪ್ಪ.—ಸರಕಾರಕ್ಕೆ ಕಾರವಾರ ಜಿಲ್ಲೆಯಲ್ಲಿರುವ ಭೂಮಿಯನ್ನು ವ್ಯವಸಾಯ ಮಾಡುವವರಿಗೂ ಕೊಡಬೇಕೆಂದು ಇದೆ. ಅದನ್ನು ನೋಡಿ ಕೊಡಲಾಗುತ್ತದೆ.

Scarcity conditions in Chickmagalur and Kadur Taluks.

*Q. —509. Smt. B. L. SUBBAMMA (Chickmagalur).—

Will the Minister for Revenue be pleased to state :—

(*a*) whether they are aware that the people of Chickmagalur and Kadur taluks are put to hardships due to scarcity of food and drinking water on account of failure of rains this year ;

(*b*) the relief measures taken by them in this behalf ;

(*c*) the number of applications received from both Chickmagalur and Kadur taluks for sanction of takavi loans during this year ;

(*d*) the amount of loan sanctioned ?

A.—Sri M. V. KRISHNAPPA (Minister for Revenue).—

(*a*) Yes.

(*b*) In Kadur taluk 40 relief works at an estimated cost of Rs. 69,641 and in Chickmagalur taluk 29 relief works at an estimated cost of Rs. 33,600 have been taken for execution and they are in progress.

(*c*) Kadur Taluk ... 537
Chickmagalur Taluk 739 (from affected villages) 99 (from other villages).

(*b*) Kadur Taluk ... 27,750.
In addition, a further amount of Rs. 20,000 is expected to be sanctioned before the end of the financial year 1965-66.
Chickmagalur Taluk—58,100.
In addition, a further amount of Rs. 5,900 is expected to be sanctioned before the end of the financial year 1965-66.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಚಿಕ್ಕಮಗಳೂರು ಹಾಗೂ ಕಡೂರು ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಉಂಟಾಗಿದೆ ಎಂದು ಯಾವ ಯಾವ ಗ್ರಾಮಗಳಲ್ಲಿ ಕಂದಾಯವನ್ನು ಮನ್ನಾ ಮಾಡ ಬೇಕೆಂದು ಜಿಲ್ಲಾಧಿಕಾರಿಗಳು ಸರಕಾರಕ್ಕೆ ವರದಿ ಕಳುಹಿಸಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಕನಬಾ ಹೋಬಳಿಯು 39 ಗ್ರಾಮಗಳು, ಲಕ್ಕೆ ಹೋಬಳಿಯಲ್ಲಿರುವ 61 ಗ್ರಾಮಗಳು, ಅಂಬಳೆ ಹೋಬಳಿಯಲ್ಲಿರುವ 10 ಗ್ರಾಮಗಳು ಇಲ್ಲಿನ ರೈತರುಗಳಿಗೆ ಬೆಳೆ ಬಾರದೆ ಕಷ್ಟವಾಗಿರುವುದರಿಂದ ಇಲ್ಲಿ ರ್ಯಾಂಡ್ ರೆವೆನ್ಯೂ ಸರ್ವೆ ಮಾಡಬೇಕೆಂದು ಇದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಕಡೂರು ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳಲ್ಲಿ ಕಂದಾಯವನ್ನು ಮನ್ನಾ ಮಾಡಬೇಕೆಂದು ಇದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಡೂರು ತಾಲ್ಲೂಕು ಹಾಗೂ ಜಿಲ್ಲೆಯ ವಿವರಗಳು ಈಗ ನನ್ನ ಹತ್ತಿರ ಇಲ್ಲ. ತಾವು ಚಿಕ್ಕಮಗಳೂರು ಜಿಲ್ಲೆ ಕೇಳಿದ್ದೀರಿ ಅದನ್ನು ಮಾತ್ರ ತರಿಸಿದೆ. ತಮಗೆ ಬೇಕಾದರೆ ಕಡೂರು ಜಿಲ್ಲೆಯ ವಿವರಗಳನ್ನು ತರಿಸಿಕೊಡುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ನಮ್ಮ ಭಾಗದಲ್ಲಿರುವ ಗ್ರಾಮಗಳಲ್ಲಿರುವ ರೈತರು ಬಹಳ ಕಷ್ಟಪರಿಸ್ಥಿತಿಗೆ ಸಿಕ್ಕಿರುವುದರಿಂದ ಇವರಿಗಾಗಿ ತಕಾವಿ ಸಾಲಗಳನ್ನು ಜಾಸ್ತಿ ಕೊಟ್ಟು ವ್ಯವಸಾಯ ಮಾಡುವವರಿಗೆ ಅನುಕೂಲ ಮಾಡಿಕೊಡಲು ಸರಕಾರ ಯಾವ ಯಾವ ಕಾರ್ಯಕ್ರಮ ಕೈಗೊಂಡಿದೆ ? ಸರಕಾರ ಇದಕ್ಕಾಗಿ ಎಷ್ಟು ಹಣವನ್ನು ಪುನಃ ಮಂಜೂರು ಮಾಡಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಾಗಲೇ ಚಿಕ್ಕಮಗಳೂರು ಜಿಲ್ಲೆಗಾಗಿ ಸುಮಾರು ಒಂದೂವರೆ ಲಕ್ಷ ರೂಪಾಯಿಗಳಷ್ಟು ತಕಾವಿ ಸಾಲಗಳನ್ನು ಕೊಡಲಾಗಿದೆ. ಈ ಸಾರಿ ಏನೋ ದೇವರ ಕೃಪೆಯಿಂದ ಕಳೆದ ಹಾಗೂ ಮೂರಿಗೆರೆ ಇಲ್ಲೆಲ್ಲಾ ಬಹಳ ಭಾರಿಯಾದ ಮಳೆ ಬರುತ್ತಿದೆ ಎಂದು ಇವೊತ್ತು ಜಿಲ್ಲಾಧಿಕಾರಿಗಳು ನನಗೆ ತಿಳಿಸಿದರು ಮತ್ತು ಚಿಕ್ಕಮಗಳೂರಿನಲ್ಲೂ ಕೂಡ ಮಳೆಯಾಗಿ ಅಲ್ಲಿನ ಕೆರೆಗಳೆಲ್ಲಾ ತುಂಬಿವೆ ಎಂದೂ ತಿಳಿದು ಬಂದಿವೆ. ಇದರಿಂದ ಈಗ ಇಲ್ಲಿ ಜನಕ್ಕೆ ನೀರಿನ ತಾಪತ್ರಯವಿಲ್ಲ.

ಶ್ರೀ ಅಲ್ಲಂಕರಿಬಸಪ್ಪ.—ಹೋದ ವರ್ಷ ನಮ್ಮ ಮೈಸೂರು ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಇತ್ತು ಎಂದು ಸರಕಾರಕ್ಕೂ ಗೊತ್ತಿದೆ. ಅದರಿಂದ ಎಲ್ಲಕಡೆಗೂ ಸರಕಾರ ಸಹಾಯ ಮಾಡುತ್ತಿದೆ ಎಂದು ಹೇಳಿದರು. ಹಾಗಾದರೆ ನಮ್ಮ ಬಳ್ಳಾರಿ ಜಿಲ್ಲೆಗಾಗಿ ಏನು ಕೊಡಲಾಗಿದೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲೆಲ್ಲಿ ಅಭಾವವಿದೆಯೋ ಅದನ್ನು ನೋಡಿಕೊಂಡು ಆಯಾ ಜಿಲ್ಲೆಗಳಲ್ಲಿರುವ ಜಿಲ್ಲಾಧಿಕಾರಿಗಳೇ ಯೋಚನೆ ಮಾಡಿ ಸಹಾಯ ಮಾಡಬಹುದು, ಅವರಿಗೇ ಅಧಿಕಾರ ಕೊಡಲಾಗಿದೆ. ಸರಕಾರ ಇಲ್ಲಿಂದ ನೇರವಾಗಿ ಸಹಾಯ ಮಾಡುತ್ತಿಲ್ಲ. ಇದನ್ನು ಆಯಾ ಜಿಲ್ಲಾಧಿಕಾರಿಗಳಿಗೇ ಕೊಡಬೇಕೆಂದು ಕ್ಯಾಬಿನೆಟ್ಟಿನಲ್ಲೂ ತೀರ್ಮಾನವಾಗಿದೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳೇ ಅಗಾಗ್ಗೆ ಅಭಾವದ ಜಾಗಗಳಿಗೆ ಹೋಗಿ ನೋಡಿಕೊಂಡು ಬಂದು ಸಾಕಷ್ಟು ಪರಿಹಾರ ಎಲ್ಲೆಲ್ಲಿ ಅಗತ್ಯವೋ ಅದನ್ನು ನೋಡಿಕೊಂಡು ಕೊಡಬಹುದು ಎಂದು ಅವರಿಗೇ ಸೂಚನೆ ಕೊಡಲಾಗಿದೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಈಗ ಅಭಾವಕ್ಕೆ ಒಳಗಾಗಿರುವ ಪ್ರದೇಶಗಳಲ್ಲಿ ರೈತರು ಮುಂದಿನ ಹೈರನ್ನು ಬೆಳೆಸುವುದಕ್ಕೆ ಕಷ್ಟವಾಗಿದೆ. ಇಂತಹವರ ಪರಿಸ್ಥಿತಿಯನ್ನು ತಿಳಿದುಕೊಂಡು ಇಲ್ಲಿನ ಜನಗಳಿಗೆ ಹೆಚ್ಚು ಹೆಚ್ಚಾಗಿ ತಕಾವಿ ಸಾಲಗಳನ್ನು ಕೊಟ್ಟು ಮುಂದಿನ ಹೈರನ್ನು ಬೆಳೆಸಿಕೊಳ್ಳಲು ಸರಕಾರ ಸಹಾಯ ಮಾಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಳೆ ಬಂದ ಕೂಡಲೇ ರೈತರು ವ್ಯವಸಾಯ ಮಾಡುವುದಕ್ಕೆ ಅಗುವುದಿಲ್ಲ ಈಗೇನೋ ನಮಗೆ ತಿಳಿದಂತೆ ಕಾವೇರಿ ನದಿಯಲ್ಲೂ ಕೂಡ ದಿನಕ್ಕೆ ಒಂದೆರಡು ಅಡಿಗಳಷ್ಟು ನೀರು ಹೆಚ್ಚಾಗಿ ಬರುತ್ತಿದೆ. ಆದರೆ ನೀರು ಬಂತು ಎಂದು ರೈತರ ಕಷ್ಟ ಹೋಗುವುದಿಲ್ಲ. ಇದು ಸರಕಾರಕ್ಕೆ ಗೊತ್ತಿದೆ. ಮುಂದಿನ ಬೆಳೆ ಬರುವವರೆಗೆ ರೈತರಿಗೆ ಸಹಾಯ ಮಾಡಬೇಕು. ಈ ದೃಷ್ಟಿಯಿಂದ ಈಗಾಗಲೇ ಮುಖ್ಯ ಮಂತ್ರಿಗಳು ಕೇಂದ್ರದವರನ್ನು ಸುಮಾರು ಎರಡು ಕೋಟಿಯಷ್ಟು ಹಣವನ್ನು ಸಾಲವಾಗಿ ಕೊಡಬೇಕೆಂದು ಕೇಳಿದ್ದಾರೆ. ಹಿಂದೆ ಕೇಂದ್ರದವರು ಕೊಟ್ಟಿರುವ ಮೂರು ಕೋಟಿ ಹಣದಲ್ಲಿ ನಾವು ಈಗಾಗಲೇ ಎರಡೂವರೆ ಕೋಟಿಯಷ್ಟು ಹಣವನ್ನು ಖರ್ಚು ಮಾಡಲಾಗಿದೆ. ಇನ್ನೂ 50 ಲಕ್ಷದಷ್ಟು ಹಣ ಉಳಿದಿದೆ. ಈಗ ಮುಖ್ಯ ಮಂತ್ರಿಗಳು ಕೇಳಿರುವ ಎರಡು ಕೋಟಿ ಸಾಲವೂ ಬಂದರೆ ಅದನ್ನೂ ತಗೆದುಕೊಂಡು ರೈತರಿಗೆ ಬೇರೆ ಬೇರೆ ವಿಧದಲ್ಲಿ ಸಹಾಯಮಾಡ ಮಾಡಬೇಕೆಂದು ಇದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತುಮಕೂರು ಜಿಲ್ಲೆಯಲ್ಲಿ ಅಭಾವ ಇದೆ ಎಂದು ಸರಕಾರಕ್ಕೆ ಗೊತ್ತಿದೆ. ಇಲ್ಲಿ ಅನೇಕ ರೈತರು ತಕಾವಿ ಸಾಲಕ್ಕಾಗಿ ಅರ್ಜಿಕೊಟ್ಟಿದ್ದರೂ ಅವು ಒಂದೂ ಮಂಜೂರಾಗಿಲ್ಲ. ಮತ್ತು ಇಲ್ಲಿನ ರೈತರುಗಳಿಗೆ ಸಹಾಯ ಮಾಡಲು ಯಾವ ಯಾವ ಗ್ರಾಮಗಳಲ್ಲಿ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲಿರುವುದು ಚಿಕ್ಕಮಗಳೂರು ಜಿಲ್ಲೆ ಪ್ರಶ್ನೆ. ತಾವು ತುಮಕೂರು ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಆಗ ಉತ್ತರ ಕೊಡಬಹುದು.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಅಭಾವ ಪರಿಸ್ಥಿತಿ ಇರುವ ಪ್ರದೇಶಗಳಲ್ಲಿ ಕಂದಾಯ ಮನ್ನಾ ಮಾಡುತ್ತೇವೆಂದು ಹೇಳುವಾಗ ಬಾಗಾಯ್ತು, ಜಮೀನಿಗೆ ಕ್ರಂದಾಯವನ್ನು ಏಕೆ ಮನ್ನಾ ಮಾಡಲಿಲ್ಲ ?

ಶ್ರೀ ಎಂ. ವಿ. ಕೃಷ್ಣಪ್ಪ.—ಖುಷ್ಕಿ ಜಮೀನಿಗೆ ಕಂದಾಯದ ರಿಮಿಷನ್ ಇಲ್ಲ. ತರಿ ಜಮೀನಿಗಾಗಿ ರಿಮಿಷನ್ ಮಾಡಲು ರೂಲ್ಸುಗಳು ಆಕ್ಟ್‌ನಲ್ಲಿದೆ. ಬಾಗಾಯ್ತು ಜಮೀನಿಗೆ ಬಾವಿಯಿಂದ ವ್ಯವಸಾಯ ಮಾಡುತ್ತಾರೆ. ಇಲ್ಲಿ ರಿಮಿಷನ್ನೇ ಬರುವುದಿಲ್ಲ. ಆದರೆ ಸಸ್‌ಪೆನ್‌ಷನ್ ಮಾಡಿದೆ ಎಂದು ತಾವು ಹೇಳಿದಿರಿ, ಅದನ್ನು ಮಾಡಿದ್ದರೆ ಯೋಚನೆ ಮಾಡಿ ನೋಡುತ್ತೇನೆ.

ಶ್ರೀ ಅಂದಾನಯ್ಯ.—ಅಭಾವ ಪರಿಸ್ಥಿತಿಗೆ ಅನೇಕ ಕಡೆ ರೈತರುಗಳು ಸಿಕ್ಕಿ ಅವರು ಮುಂದಿನ ಸಾಲನ ಬೆಳೆಯನ್ನು ಮಾಡಲು ಅವರಿಗೆ ಬೀಜ ಕೊಳ್ಳಲು ಕೂಡ ಶಕ್ತಿ ಇಲ್ಲ. ಇಂತಹವರಿಗಾಗಿ ಬಿತ್ತನೆ ಬೀಜಗಳನ್ನು ಮುಫತ್ತಾಗಿ ಸರ್ಕಾರದವರು ಕೊಡಲು ಯೋಚನೆ ಮಾಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ವ್ಯವಸಾಯ ಇಲಾಖೆಯವರು ಬೀಜಗಳನ್ನು ಸಕಾಲದಲ್ಲಿ ಬಿತ್ತನೆ ಬೀಜಗಳನ್ನು ಕೊಡುತ್ತಾರೆ. ಆದರೆ ಮುಫತ್ತಾಗಿ ಅಲ್ಲ. ತಕಾವಿ ಸಾಲದ ರೂಪದಲ್ಲಿ ಆಗಾಗ್ಗೆ ರಾಗಿ ಬಿತ್ತನೆ ಬೀಜ ಹಾಗೂ ಜೋಳದ ಬಿತ್ತನೆ ಬೀಜಗಳನ್ನು ವ್ಯವಸಾಯ ಇಲಾಖೆಯವರು ಕೊಡಲು ತಕ್ಕ ಕಾರ್ಯಕ್ರಮ ಹಾಕಿಕೊಂಡಿದ್ದಾರೆ, ಅದರಂತೆ ಏರ್ಪಾಡು ಕೂಡ ಮಾಡುತ್ತಿದ್ದಾರೆ.

2-00 P.M.

ಶ್ರೀ ಬಿ. ಬೈರಪ್ಪಾಜಿ.—ಬೆಳೆಯಾಗದೆ ಇರತಕ್ಕ ಹಳ್ಳಿಗಳಿಗೆ ರೆಮಿಷನ್ ಕೊಡುವಂತೆ ಅನೇಕ ಸಾರಿ ಸರ್ಕಾರಕ್ಕೆ ಮನವಿ ಮಾಡಿಕೊಂಡರೂ ಸಹ ಆ ಮನವಿಗಳಿಗೆ ಯಾವ ಕ್ರಮವನ್ನೂ ತೆಗೆದು ಕೊಂಡಿಲ್ಲ. ಇನ್ನು ಮುಂದಾದರೂ ಏನೂ ಬೆಳೆಯಾಗದ ಹಳ್ಳಿಗಳಿಗೆ ಕಂದಾಯದ ರೆಮಿಷನ್ ಬಗ್ಗೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನೆನ್ನೆದಿವಸ ಹೇಳಿದೆ, ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆಂದು.

Mr. SPEAKER.—Question Hour is over.

QUESTIONS FOR ANSWERS ON THE DAY.

(but not taken up)

Construction of Kalyanies (Ponds).

*Q.—289. Sri R. KENCHAPPA (Pavagada).—

Will the Minister for Public Works be pleased to state.—

(*a*) whether a master plan in respect of construction of Kalyanies (ponds) to natural springs (Thalapariges) in the State has been prepared under the Minor Irrigation Scheme ;

(*b*) the number of such natural springs in Pavagada Taluk ;

(*c*) the extent of land irrigated by these wells in the said Taluk ?